ಅಧ್ಯಕ್ಷರು : ಅದನ್ನು ನೋಡುತ್ತೇನೆ.

ಶ್ರೀ ಸಿ. ಭೈರೇಗೌಡ : ದಯವಿಟ್ಟು ಇದಕ್ಕೆ ಒಂದು ಹೇಳಿಕೆಯನ್ನು ಕೊಡಿಸಬೇಕು. ಈ ಸದನ ಪ್ರಾರಂಭ ಆದಾಗ ಒಂದು ವಿಚಾರದ ಬಗ್ಗೆ ನಾನು ನೋಟೀಸ್ ಅನ್ನು ಕೊಟ್ಟಿದ್ದೆ.

*1.25 ಪಿ.ಎಂ.*

**ಗಲ್ಬರ್ಗಾದಲ್ಲಿ ಜಿಲ್ಲಾ ಪರಿಷದ್ ಸದಸ್ಯರು ಹಾಗೂ ಸ್ಥಾಯಿ ಸಮಿತಿ ಅಧ್ಯಕ್ಷರು ಕೊಲೆಯಾಗಿರುವ ಬಗ್ಗೆ**

ಗುಲ್ಬರ್ಗಾದಲ್ಲಿ ದಿನಾಂಕ ೧-೬-೯೧ರಲ್ಲಿ ಭೀಕರವಾದ ಕೊಲೆ ನಡೆದಿದೆ. ಹಗಲು ೧೧ ಘಂಟೆ ಸಮಯದಲ್ಲಿ ನಮ್ಮ ಪಕ್ಷದ ಕಾರ್ಯಕರ್ತರಾದ ಶ್ರೀ ಗೌಡಪ್ಪಗೌಡರ ಕೊಲೆ ನಡೆದಿದೆ. ಅವರು ಒಬ್ಬ ಜಿಲ್ಲಾ ಪರಿಷತ್ತು ಸದಸ್ಯರಾಗಿದ್ದು ಮತ್ತು ಒಂದು ಸ್ಥಾಯಿ ಸಮಿತಿ ಅಧ್ಯಕ್ಷರು ಕೂಡ ಆಗಿದ್ದಾರೆ. ಹಗಲು ೧೧ ಘಂಟೆ ಸಮಯದಲ್ಲಿ ಕೊಲೆ ನಡೆದಿದೆ. ಅಪರಾಧಿಗಳನ್ನು ನೋಡಿರತಕ್ಕಂಥವರು ಇದ್ದಾರೆ. ಮತ್ತು ಅವರನ್ನು ಇಲ್ಲಿಯವರೆಗು ಅರೆಸ್ಟ್ ಮಾಡಿಲ್ಲ. ಮತ್ತು ಅವರಿಗೆ ರಕ್ಷಣೆ ಕೊಡತಕ್ಕಂಥ ಪ್ರಯತ್ನ ಕೂಡ ಇವತ್ತು ನಡೆದಿದೆ. ಹಗಲು ೧೧ ಘಂಟೆಯಲ್ಲಿ ಕೊಲೆಯಾಗಿದೆ. ಇದು ಒಬ್ಬ ರಾಜಕೀಯ ಪಕ್ಷದ ಮಖಂಡರನ್ನು ಕೊಲೆ ಮಾಡಿರತಕ್ಕ ವಿಷಯವಾಗಿದೆ. ಇದರ ಬಗ್ಗೆ ಸರ್ಕಾರ ಇನ್ನೂ ಕೂಡ ಕ್ರಮ ತೆಗೆದುಕೊಂಡಿಲ್ಲ. ಇದರ ಹಿಂದೆ ಪ್ರಬಲವಾದ ಜನ ಸಾಕಷ್ಟು ಇದ್ದಾರೆ. ಇದರಲ್ಲಿ ಮಾನ್ಯ ಗೃಹ ಮಂತ್ರಿಗಳ ಕೈ ಕಟ್ಟಿದೆ ಎಂದು ನನಗೆ ತಿಳಿದಿದೆ. ಆದ್ದರಿಂದ ಇವತ್ತು ಇದರ ಬಗ್ಗೆ ತೀವ್ರವಾದ ಕ್ರಮವನ್ನು ಮಾನ್ಯ ಗೃಹ ಮಂತ್ರಿಗಳು ತೆಗೆದುಕೊಳ್ಳಬೇಕು. ಇದು ಅವರ ಕೈ ಮೀರಿರುವಂತಹ ಪ್ರಯತ್ನ ನಡೆದಿದೆ. ಇದರ ಬಗ್ಗೆ ಒಂದು ಹೇಳಿಕೆ ಕೊಡುವುದಕ್ಕೆ ದಯವಿಟ್ಟು ತಾವು ಹೇಳಬೇಕು ಮತ್ತು ನಾನು ಈ ವಿಷಯ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಮತ್ತು ಅಲ್ಲಿ ಸಾಕ್ಷಿಗಳು ಏನಿದ್ದಾರೆ ಅವರನ್ನು ಬೆದರಿಸತಕ್ಕಂಥ ಕೆಲಸ ಸಹ ನಡೆಯುತ್ತಿದೆ.

## ಅರ್ಜಿಗಳನ್ನೊಪ್ಪಿಸುವುದು

೧) ಶ್ರೀ ಚೌಡರೆಡ್ಡಿ : ಚಿಂತಾಮಣಿಯ ಚಿತ್ರಮಂದಿರಗಳ ಮಾಲೀಕರು ತೆರಿಗೆಯನ್ನು ವಂಚಿಸುತ್ತಿರುವುದರಿಂದ ಪುರಸಭೆಗೆ ಆಗುತ್ತಿರುವ ಆದಾಯ ಖೋತಾದ ಬಗ್ಗೆ ಅರ್ಜಿಯನ್ನೊಪ್ಪಿಸುತ್ತಿದ್ದೇನೆ.

೨) ಶ್ರೀ ಟಿ.ಬಿ. ಜಯಚಂದ್ರ : ಶಿರಾ ತಾಲ್ಲೂಕು ಭಟ್ಟಿಗನಹಳ್ಳಿ ಗ್ರಾಮದ ಪರಿಶಿಷ್ಟ ಜನಾಂಗಕ್ಕೆ ಮಾದನ ಹಳ್ಳಿಯಲ್ಲಿರುವ ಅರಣ್ಯ ಇಲಾಖೆಗೆ ಸೇರಿದ ಜಮೀನನ್ನು ಸಾಗುವಳಿಗೆ ಮಂಜೂರು ಮಾಡುವ ಬಗ್ಗೆ ಅರ್ಜಿಯನ್ನೊಪ್ಪಿಸುತ್ತಿದ್ದೇನೆ.

೩) ಶ್ರೀ ಪ್ರಭಾಕರ ಎಸ್. ರಾಣೆ. ಧಾರವಾಡ ಜಿಲ್ಲೆಯ ಕ್ಯಾರಕೊಪ್ಪ ಮತ್ತು ಚಿಕ್ಕಮಲಗವಾಡ ಗ್ರಾಮಗಳ ಸುತ್ತಮುತ್ತ ನೀಲಗಿರಿ ಮರಗಳನ್ನು ಕಡಿದಿರುವ ಬಗ್ಗೆ ಅರ್ಜಿಯನ್ನೊಪ್ಪಿಸುವುದು.

೪) ಶ್ರೀ ಜಿ.ಎಸ್. ಆಚಾರ್ : ಈ ಕೆಳಕಂಡ ಅರ್ಜಿಗಳನ್ನೊಪ್ಪಿಸುವುದು ಕುಂದಾಪುರ ತಾಲ್ಲೂಕಿನ ಪಡುವರಿ ಗ್ರಾಮಕ್ಕೆ ಕುಡಿಯುವ ನೀರಿನ ಪೂರೈಕೆ ಬಗ್ಗೆ ಅರ್ಜಿಯನ್ನೊಪ್ಪಿಸುತ್ತಿದ್ದೇನೆ.

ಅ) ಕೊಂಕಣ ರೈಲ್ವೆ ಮಾರ್ಗದಲ್ಲಿ ಚಕ್ರನದಿ ಮತ್ತು ಕೊಲ್ಲೂರು ಹೊಳೆಗೆ ಸೇತುವೆ ನಿರ್ಮಿಸುವಾಗ ಜೊತೆಗೆ ವಾಹನ ಸೇತುವೆ ನಿರ್ಮಿಸುವ ಬಗ್ಗೆ ಹಾಗೂ

ಆ) ಕುಂದಾಪುರ ತಾಲ್ಲೂಕು ಪಡುವರಿ ಗ್ರಾಮಕ್ಕೆ ರಸ್ತೆ ನಿರ್ಮಾಣ ಕುರಿತು ಹಾಗೂ

ಇ) ಕುಂದಾಪುರ ತಾಲ್ಲೂಕು ಕಿರಿಮಂಜೇಶ್ವರ ಗ್ರಾಮದಿಂದ ಕೊಡೇರಿಯ ಗ್ರಾಮಕ್ಕೆ ಹೊಸ ರಸ್ತೆ ರಚಿಸುವ ಬಗ್ಗೆ ಬಂದ ಸಾರ್ವಜನಿಕರ ಅರ್ಜಿಗಳನ್ನು ತಮ್ಮ ಮೂಲಕ ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಈ ಎಲ್ಲಾ ಅರ್ಜಿಗಳನ್ನು ಒಪ್ಪಿಸಲಾಯಿತು.

(ಛೇರ್ಮನ್ ಶ್ರೀ ಬಿ.ಎಂ. ಇದಿನಬ್ಬ ಅವರು ಅಧ ಪೀಠವನ್ನು ಅಲಂಕರಿಸಿದರು)

## ನಿಯಮ 334ರ ಮೇರೆಗೆ

**(1) ಸಂಚಾರಿ ಪೋಲೀಸ್ ಹಾಗೂ ಜೀಬ್ರಾ ಕ್ರಾಸಿಂಗ್ ಹಾಕುವುದು**

ಶ್ರೀ ಕೆ. ಲಕ್ಷ್ಮಣ್ (ರಾಜಾಜಿನಗರ) : ರಾಜಾಜಿನಗರದ ೬ನೇ ಬಡಾವಣೆಯಲ್ಲಿ ಬಹಳಷ್ಟು ಶಾಲೆಗಳನ್ನು ಒಳಗೊಂಡಿದ್ದು ಅಂದರೆ ಸೆಂಟ್‌ಹ್ಯಾನ್ಸ್, ಸೆಂಟ್‌ಮಿರಾಸ್, ಪೇರೆಟ್ ಹೈಸ್ಕೂಲ್ ಮತ್ತು ಸರ್ಕಾರಿ ಪ್ರೌಢಶಾಲೆಗಳಿದ್ದು ಶಾಲೆಯ ವೇಳೆಯಲ್ಲಿ ಹಾಗೂ ಕಛೇರಿಯ ವೇಳೆಯಲ್ಲಿ ಮಕ್ಕಳು ಹಾಗೂ ಇತರರು ರಸ್ತೆಯನ್ನು ದಾಟುವುದಕ್ಕೆ ಬಹಳಷ್ಟು ತೊಂದರೆಯಾಗುತ್ತಿದೆ. ೮೦" ರಸ್ತೆಯಲ್ಲಿ ಖಾಸಗಿ, ಸರ್ಕಾರಿ ಹಾಗೂ ವಾಹನಗಳು ಬಹಳಷ್ಟು ಓಡಾಡುತ್ತಿದ್ದು ಶಾಲಾ ಮಕ್ಕಳು ರಸ್ತೆಯನ್ನು ದಾಟುವಾಗ ಅನೇಕ ವೇಳೆ ಪ್ರಾಣವನ್ನು ಕಳೆದುಕೊಂಡಿರುವ ಸಂದರ್ಭಗಳಿರುತ್ತವೆ. ಈ ಹಿನ್ನೆಲೆಯಲ್ಲಿ ಸಂಬಂಧ ಪಟ್ಟ ಪೊಲೀಸ್ ಹಾಗೂ ಸಂಚಾರಿ ಪೋಲೀಸನ್ನು ಹಾಕಿಸಲು ಅಲ್ಲಿಯ ಸ್ಥಳೀಕರು ಸಂಬಂಧಪಟ್ಟ ಅಧಿಕಾರಿಗಳನ್ನು ಕೋರಿಕೊಂಡಿದ್ದರು ಸಹ ಇದುವರೆಗಾಯ್ತು ಯಾವುದೇ ಕ್ರಮ ಕೈಗೊಂಡಿರುವುದಲ್ಲ, ಅದು ಅಲ್ಲದೆ ೬ನೇ ಕ್ರಾಸಿನ ಬಳಿ ಆಟೋ ರಿಕ್ಷಾಗಳು ನಿಲ್ಲುವುದನ್ನು ತಡೆಗಟ್ಟಲು, ಶಾಲಾ ವೇಳೆಯಲ್ಲಿ (ದಿನವೂ ಇದ್ದರೂ ಒಳ್ಳೆಯದೆ) ಸಂಚಾರಿ ಪೊಲೀಸನ್ನು ನೇಮಿಸಲು ಹಾಗೂ ಜೀಬ್ರಾ ಕ್ರಾಸಿಂಗ್ ಹಾಕಿಸುವ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಮಾನ್ಯ ಗೃಡ ಸಚಿವರ ಗಮನಕ್ಕೆ ತರಲಾಗಿದೆ. (ಸಂಬಂಧಪಟ್ಟ ಮಾಹಿತಿಗಳನ್ನು ಲಗತ್ತಿಸಲಾಗಿದೆ)

ಶ್ರೀ ಜಿ. ಪುಟ್ಟಸ್ವಾಮಿಗೌಡ: (ಆರೋಗ್ಯಸಚಿವರು) : ಗೃಹಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಗಳನ್ನು ಮಾಡಲಿಚ್ಚಿಸುತ್ತೇನೆ.

ಬೆಂಗಳೂರು ನಗರದಲ್ಲಿ ಪಾದಚಾರಿಗಳು ರಸ್ತೆ ದಾಟಬೇಕಾದ ಕಡೆಗಳಲ್ಲಿ ಜೀಬ್ರಾ ಕ್ರಾಸಿಂಗ್ಸ್ (ಪೆಡೆಸ್ಟ್ರಿಯನ್ಸ್ ಕ್ರಾಸಿಂಗ್ಸ್) ಸ್ಥಳಗಳಲ್ಲಿ ಬಣ್ಣ ಹಚ್ಚಿಸಬೇಕಾದದ್ದು ಬೆಂಗಳೂರು ಮಹಾ ನಗರ ಪಾಲಿಕೆ ಮಾಡಬೇಕಾಗಿದೆ. ಎಲ್ಲೆಲ್ಲಿ ಹೀಗೆ ಬಣ್ಣ ಹಚ್ಚಬೇಕಾಗಿದೆ ಎಂದು ಸ್ಥಳಗಳನ್ನು ಗುರುತಿಸಿ, ಬೆಂಗಳೂರು ನಗರ ಸಂಚಾರಿ ಪೋಲೀಸಿನವರು ನಗರಪಾಲಿಕೆಗೆ ತಿಳಿಸುತ್ತಾರೆ. ಈ ವರ್ಷದ ಮೊದಲ ಭಾಗದಲ್ಲಿ ಬೆಂಗಳೂರು ಮಹಾನಗರದ ಯಾವ ಯಾವ ರಸ್ತೆಗಳಿಗೆ ಹೀಗೆ ಬಣ್ಣ ಹಚ್ಚಿಸಬೇಕಾಗಿದೆಯೆಂಬ ಒಟ್ಟಾರೆ ಪ್ರಸ್ತಾವನೆಯನ್ನು ಬೆಂಗಳೂರು ಮಹಾನಗರಪಾಲಿಕೆಗೆ ಈಗಾಗಲೇ ತಿಳಿಸಲಾಗಿದೆ. ಇದಕ್ಕೆ ತಗಲುವ ಅಂದಾಜು ವೆಚ್ಚ ಸುಮಾರು ಐದು ಲಕ್ಷ ರೂಪಾಯಿಗಳು. ಈ ಪ್ರಸ್ತಾವನೆ ಇನ್ನೂ ಮಹಾನಗರಪಾಲಿಕೆಯ ಪರಿಶೀಲನೆಯಲ್ಲೇ ಇದೆ. ಇತ್ತೀಚಿನ

ಮಳೆಯಿಂದ ಈ ಮುಂಚೆ ಪೆಡೆಸ್ಟ್ರಿಯನ್ ಕ್ರಾಸಿಂಗ್ಸ್‌ನಲ್ಲಿ ಹಚ್ಚಲಾಗಿದ್ದ ಜೀಬ್ರಾ ಕ್ರಾಸಿಂಗ್ಸ್ ಅಳಿಸಿಹೋಗಿರಲೂ ಬಹುದು ಮತ್ತು ಕಾಣಿಸದಂತೆಯೂ ಆಗಿರಬಹುದಾದ ಪುನ: ಬಣ್ಣ ಬಳಿಯುವ ಕೆಲಸ ಮಹಾನಗರಪಾಲಿಕೆಯಿಂದ ಮಂಜೂರಾತಿ ಅಥವಾ ಬಳಿಯುವ ಬಣ್ಣ ಒದಗಿಸಿದ ಕೂಡಲೇ ಮಾಡಲು ನಗರ ಸಂಚಾರಿ ಪೋಲೀಸರು ಸಿದ್ಧರಿದ್ದಾರೆ. ಈ ಬಗ್ಗೆ ಮಹಾನಗರಪಾಲಿಕೆಯನ್ನು ಶೀಘ್ರ ಮಂಜೂರಾತಿಗಾಗಿ ಜ್ಞಾಪಿಸುತ್ತಿರಲಾಗಿದೆ. ಈ ಕೆಲಸಕ್ಕಾಗಿ ನಗರ ಪೋಲೀಸ್ ಸಂಚಾರಿ ವಿಭಾಗಕ್ಕೆ ಪ್ರತ್ಯೇಕವಾದ ಹಣ ಗೊತ್ತುಪಡಿಸಿಲ್ಲ.

ಹೀಗಿದ್ದು, ರಸ್ತೆ ದಾಟುವ ಪಾದಚಾರಿಗಳು ಮತ್ತು ಶಾಲಾ ಮಕ್ಕಳು ಇವರ ಸುರಕ್ಷತೆಯ ದೃಷ್ಟಿಯಿಂದ ಹಾಲಿ ಇರುವ ಸಂಚಾರಿ ಪೋಲೀಸ್ ಸಿಬ್ಬಂದಿಯಲ್ಲಿ ಕೆಲವರನ್ನು, ಮಾನ್ಯ ಸದಸ್ಯರು ಸೂಚಿಸಿರುವಂತೆ ರಾಜಾಜಿನಗರ ಆರನೇ ಬ್ಲಾಕ್‌ನಲ್ಲೂ ಸಹ ಟ್ರಾಫಿಕ್ ಪೇದೆಯನ್ನು ನೇಮಿಸುವ ಏರ್ಪಾಡು ಮಾಡಲಾಗಿದೆ. ಮತ್ತು ೭ನೇ ಕ್ರಾಸ್ ಬಳಿ ಆಟೋರಿಕ್ಷಾಗಳು ಸುವ್ಯವಸ್ಥಿತವಾಗಿ ಪಾದಚಾರಿಗಳಿಗೆ ತೊಂದರೆಯಾಗದಂತೆ ಒಂದು ಗೊತ್ತಾದ ಸ್ಥಳದಲ್ಲಿ ಪಾರ್ಕ್ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ.

ಮಾನ್ಯ ಸದಸ್ಯರು ಮತ್ತು ರಾಜಾಜಿನಗರ ಆರನೇ ಬದಾಲಾವಣೆಯ ನಾಗರಿಕರು ದಿನಾಂಕ ೯-೮-೯೧ ರಂದು ನನಗೆ ಈ ಬಗ್ಗೆ ಮನವಿಯೊಂದನ್ನು ಕೊಟ್ಟಿದ್ದರು. ಈ ವಿಷಯವನ್ನು ನಾನು ನಗರ ಪೋಲೀಸ್ ಕಮಿಷನರ್ ಮತ್ತು ಸಂಚಾರಿ ವಿಭಾಗದ ಡಿ.ಸಿ.ಪಿ.ಯಾರೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲು ಈಗಾಗಲೇ ಆದೇಶ ನೀಡಿದ್ದೇನೆ.

ಮಾನ್ಯ ಸದಸ್ಯರು ಮತ್ತು ರಾಜಾಜಿನಗರ ಆರನೇ ಬಡಾವಣೆಯ ನಾಗರಿಕರು ದಿನಾಂಕ 9-8-91ರಂದು ನನಗೆ ಈ ಬಗ್ಗೆ ಮನವಿಯೊಂದನ್ನು ಕೊಟ್ಟಿದ್ದರು. ಈ ವಿಷಯವನ್ನು ನಾನು ನಗರ ಪೋಲೀಸ್ ಕಮಿಷನರ್ ಮತ್ತು ಸಂಚಾರಿ ವಿಭಾಗದ ಡಿ.ಸಿ.ಪಿ. ಯವರೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲು ಈಗಾಗಲೇ ಆದೇಶ ನೀಡಿದ್ದೇನೆ.

**ಸಂಚಾರಿ ಪೋಲೀಸ್ ಹಾಗೂ ಜೀಬ್ರಾ ಕ್ರಾಸಿಂಗ್ ಹಾಕುವ ಬಗ್ಗೆ**

ಮೇಲ್ಕಂಡ ವಿಷಯಕ್ಕೆ ಸಂಬಂಧ ಪಟ್ಟಂತೆ ರಾಜಾಜಿನಗರದ 6ನೇ ಬಡಾವಣೆಯ ನಾಗರೀಕರು ಕೇಳಿಕೊಳ್ಳುವುದೇನೆಂದರೆ, ರಾಜಾಜಿನಗರದ 6ನೇ ಬಡಾವಣೆಯು ಬಹಳಷ್ಟು ಶಾಲೆಗಳನ್ನು ಒಳಗೊಂಡಿರುತ್ತದೆ. ಅವುಗಳು ಯಾವುವೆಂದರೆ ಸೆಂಟ್‌ಜ್ಯಾನ್ಸ್, ಸೆಂಟ್ ಮಿನಾನ್, ಪೇರೆಂಟ್ಸ್ ಹೈಸ್ಕೂಲ್ ಮತ್ತು ಸರ್ಕಾರಿ ಪ್ರೌಢಶಾಲೆಗಳಾಗಿರುತ್ತದೆ. ಈ ಎಲ್ಲಾ ಶಾಲೆಗಳು ಬಹಳಷ್ಟು ಹತ್ತಿರದಲ್ಲಿ ಇರುವುದರಿಂದ, 80 ಅಡಿ ರಸ್ತೆಯಲ್ಲಿ ಬಹಳಷ್ಟು ವಾಹನಗಳು ಅಂದರೆ ಬಿ.ಟಿ.ಎಸ್ ಮತ್ತು ಖಾಸಗಿ ವಾಹನಗಳು ಓಡಾಡುವುದರಿಂದ, ಮಕ್ಕಳು ಮತ್ತು ಪಾದಾಚಾರಿಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ರಸ್ತೆಗಳನ್ನು ದಾಟಲು ಬಹಳಷ್ಟು ತೊಂದರೆಯಾಗಿರುತ್ತದೆ. ಇದು ಅಲ್ಲದೆ ಪಾಠಶಾಲೆಯ ಮಕ್ಕಳನ್ನು ದಾಟಿಸಬೇಕಾದರೆ ಒಂದು ಪ್ರಯಾಸದ ಕೆಲಸವೇ ಆಗುತ್ತದೆ. ಈ ಬಗ್ಗೆ ಅಲ್ಲಿಯ ಪೋಲೀಸ್ ಠಾಣೆಗೆ (ಮಾಗಡಿ ರಸ್ತೆ) ಮಕ್ಕಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ರಸ್ತೆ ದಾಟಿಸಲು ಹಾಗೂ ವಾಹನಗಳನ್ನು ನಿಯಂತ್ರಿಸಲು ಕೇಳಿಕೊಂಡಿದ್ದಾಗ್ಯೂ ಸಹ ಯಾವುದೇ ರೀತಿಯ ಕ್ರಮ ಕೈಗೊಂಡಿರುವುದಿಲ್ಲ. ಇದರ ಜೊತೆಗೆ 80 ಅಡಿ ರಸ್ತೆಯ ೭ನೇ ಕ್ರಾಸ್ ಮುಂದೆ ಬಸ್ ನಿಲ್ದಾಣ ಇದ್ದು, ಬಹಳಷ್ಟು ಆಟೋ ರಿಕ್ಷಾಗಳು ಸಹ ನಿಲ್ಲುತ್ತವೆ. ಇದರಿಂದ ಸಾಕಷ್ಟು ಅಪಘಾತಗಳಾಗಿ ಪ್ರಾಣಗಳನ್ನು ತೆಗೆದುಕೊಂಡಿರುವ ಸಂದರ್ಭಗಳುಂಟು.